ಶ್ರೀ ಕೋಣಂದೂರು ಲಿಂಗಪ್ಪ.—ಸಣ್ಣ ಪತ್ರಿಕೆಗಳಿಗೆ ಜಾಹೀರಾತು ಕೊಡುವುದನ್ನು ನಿಲ್ಲಿಸಿರುವುದಕ್ಕೆ ಕಾರಣವೇನು ? ಇನ್ನು ಮುಂದಾದರೂ ಕೂಡ ರಾಜ್ಯದಲ್ಲಿರುವ ಎಲ್ಲಾ ಸಣ್ಣ ಪತ್ರಿಕೆಗಳಿಗೂ ಹೆಚ್ಚು ಜಾಹೀರಾತುಗಳನ್ನು ನೀಡುವರೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದು ಸಣ್ಣ ಮತ್ತು ದೊಡ್ಡ ಪತ್ರಿಕೆಯ ಪ್ರಶ್ನೆಯಲ್ಲ. ವಿಷಯ ಯಾವ ಜಿಲ್ಲೆಗೆ ಸಂಬಂಧಪಟ್ಟಿದೆ ಎಂಬುದನ್ನು ನೋಡಿ ಸುತ್ತುಮುತ್ತಲಿನ ಪತ್ರಿಕೆಗಳಿಗೆ ಅದರ ಜಾಹೀರಾತನ್ನು ಕೊಡಲಾಗುವುದು. ಸ್ಟೇಟ್‌ವೈಜ್ ಆಗಿ ಸಂದರ್ಭಕ್ಕೆ ತಕ್ಕಂತೆ ಅಡ್ವರ್ಟೈಜ್ ಮಾಡಬೇಕಾಗುತ್ತದೆ. ಇಂಥ ಪತ್ರಿಕೆಗಳಿಗೇ ಕೊಡಬೇಕು ಎಂದು ಪ್ರಸ್ಕ್ರೈಬ್ ಮಾಡುವುದು ಕಷ್ಟ. ಎಲ್ಲಿ ಯಾವ ಪತ್ರಿಕೆಗೆ ಜಾಹೀರಾತು ಕೊಟ್ಟರೆ ಹೆಚ್ಚು ಅಡ್ವರ್ಟೈಜ್ ಆಗಬಹುದು ಎಂಬುದನ್ನು ನೋಡಿ ಎಲ್ಲಿಗೆ ಕೊಡುವುದರಿಂದ ಹೆಚ್ಚು ಪ್ರತಿಫಲ ಬರಬಹುದು ಎಂದು ನೋಡಿ ಅದಕ್ಕೆ ತಕ್ಕಂತೆ ಕೊಡಬೇಕಾಗುವುದು.

DISTRICT CENTRAL LIBRARY AT BIJAPUR

667. SRI J. L. KABADE (Ballolli).—Will the Minister for Education be pleased to state :—

(*a*) whether it is not a fact that the Government had issued orders in 1962 to start District Central Library at Bijapur ;

(*b*) whether according to G. O. No. ED 58 MLC 67, dated 19-1-1968 the Government had accorded sanction to the staff required for the same ;

(*c*) if so, whether the local Educational Officer was entrusted with the staff and authorised to incur expenditure for the salary, etc. of the staff and for the management of Bijapur District Central Library :

(*d*) the reason for not starting the said Library even though the Government have accorded its approval in all respects ?

SRI V. S. KOUJALGI (Minister of State for Youth Services).—On behalf of.

SRI A. R. BAPARINARAYANA (Minister for Education).—

(*a*) No.

(*b*) Yes.

(*c*) Yes.

(*d*) District Library authorities have taken up the preliminary works. Building required for the Library is under consideration.

ಶ್ರೀ ಜೆ. ಎಲ್. ಕಬಾಡಿ.—ಬಿಜಾಪುರ ಜಿಲ್ಲೆ ಕೇಂದ್ರ ಗ್ರಂಥಾಲಯವನ್ನು ಶಿಕ್ಷಣಾಧಿಕಾರಿಗಳಿಗೆ ವಹಿಸಿ ಕೊಡುವ ಪ್ರಸಂಗವೇಕೆ ಬಂತು ? ಏಕೆಂದರೆ ೧೯೬೮ರಲ್ಲೇ ವಿಜಾಪುರದಲ್ಲಿ ಕೇಂದ್ರ ಗ್ರಂಥಾಲಯ ತೆರೆಯ ಬೇಕೆಂದು ಹುಕುಂ ಆಗಿದೆ. ಹಾಗಿರುವಾಗ ಅಲ್ಲಿ ಸ್ಥಳೀಯ ಶಿಕ್ಷಣಾಧಿಕಾರಿಗೆ ಗ್ರಂಥಾಲಯದ ಕಾರ್ಯ ನಿರ್ವಹಿಸಲು ಏಕೆ ಸೂಚಿಸಲಾಯ್ತು ?

ಶ್ರೀ ವಿ. ಎಸ್. ಕೌಜಲಗಿ.—೨೬-೨-೭೧ ರಲ್ಲಿ ಇದರ ಕಾರ್ಯ ನಿರ್ವಹಿಸಲು ಡಿಸ್ಟ್ರಿಕ್ಟ್ ಎಜುಕೇಷನ್ ಆಫೀಸರಿಗೆ ಅಧಿಕಾರ ಕೊಡಲಾಗಿದೆ, ಇದಕ್ಕೆ ಸಂಬಂಧಪಟ್ಟ ಆಜ್ಞೆ ಆಗಿದೆ. ಅಂದಿನಿಂದ ಇಲ್ಲಿಯವರೆಗೆ ಅಲ್ಲಿಯ ಸಿಬ್ಬಂದಿ ರೆಕ್ರೂಟ್‌ಮೆಂಟ್ ಆಗಿದೆ. ಈ ಕೆಲಸವನ್ನು ೭-೭-೭೨ ರಿಂದ ಪೂರ್ತಿ ಚಾಲೂ ಮಾಡಿದೆ.

ಶ್ರೀ ಜೆ. ಎಲ್. ಕಬಾಡಿ.—ಅಲ್ಲಿರುವ ಆಫೀಸರು ಯಾರು ? ಅಲ್ಲಿ ಯಾವ ಆಫೀಸರನ್ನೂ ನೇಮಿಸದಿದ್ದರೆ ಗ್ರಂಥಾಲಯ ನಡೆಸುವುದು ಹೇಗೆ ?

ಶ್ರೀ ವಿ. ಎಸ್. ಕೌಜಲಗಿ.—ಅಲ್ಲಿ ಪೂರ್ವಭಾವಿ ಕೆಲಸ ಪ್ರಾರಂಭವಾಗಿದೆ. ೭-೭-೭೨ ರಿಂದ ಅಲ್ಲಿ ಕೆಲಸ ನಡೆಯುತ್ತಿದೆ. ಚೀಫ್ ಲೈಬ್ರೇರಿಯನ್ ನೇಮಿಸಿದ ಮೇಲೆ ಅವರ ಕೈಕೆಳಗೆ ಅಲ್ಲಿನ ನೌಕರರು ಕೆಲಸ ಮಾಡುವರು.

ಶ್ರೀ ಬಾಪುಗೌಡ ರಾಯಪ್ಪ.—ಬಿಜಾಪುರದಲ್ಲಿ ತೆರೆಯಲಿರುವ ಗ್ರಂಥಾಲಯದ ರೆಕರಿಂಗ್ ಮತ್ತು ನಾನ್ ರೆಕರಿಂಗ್ ವೆಚ್ಚವೆಷ್ಟು ?

ಶ್ರೀ ವಿ. ಎಸ್. ಕೌಜಲಗಿ.—ನೋಟೀಸ್.

ಶ್ರೀ ಜೆ. ಎಲ್. ಕಬಾಡಿ.—ಜುಲೈ ೧೯೭೨ ರಿಂದ ಸಿಬ್ಬಂದಿ ಕೆಲಸ ಮಾಡುತ್ತಿದೆ ಎಂದು ಹೇಳಿದರು. ಎಲ್ಲಿಯಾರ ಕೈಕೆಳಗೆ ಕೆಲಸ ಮಾಡುತ್ತಿದೆ ? ಅಲ್ಲಿ ಅಧಿಕಾರಿಯೇ ಇಲ್ಲ. ಅವರಿಗೆ ಸಂಬಳ ಕೊಡುವವರು ಯಾರು ?

ಶ್ರೀ ವಿ. ಎಸ್. ಕೌಜಲಗಿ.—ಉತ್ತರದಲ್ಲೇ ಅದನ್ನು ತಿಳಿಸಿದೆ. ೨೬-೨-೭೧ ರಿಂದ ಡಿಸ್ಟ್ರಿಕ್ಟ್ ಎಜುಕೇಷನ್ ಆಫೀಸರಿಗೆ ಆಥರೈಜ್ ಮಾಡಲಾಗಿದೆ. ಜಿ.ಓ. ನಂ. ಇಡಿ ಎಸ್‌ಎಲ್ ೭೧, ತಾರೀಖು ೨೬ನೇ ಫೆಬ್ರುವರಿ ೭೧. ಅವರು ಅಲ್ಲಿನ ಕೆಲಸ ನೋಡಿಕೊಳ್ಳುವರು.

ಶ್ರೀ ಎಂ ಎಚ್. ಜಯಂಪ್ರಕಾಶ್ ನಾರಾಯಣ್.—ಅಲ್ಲಿ ಸಿಬ್ಬಂದಿ ವರ್ಗ ನೇಮಕ ಮಾಡಲು ಅನುಮತಿ ನೀಡಿದ್ದೀರಾ ? ನೇಮಿಸಿದ್ದರೆ ಸಿಬ್ಬಂದಿ ವಿವರವೇನು ? ಸಿಬ್ಬಂದಿ ಭರ್ತಿ ಮಾಡುವಾಗ ಸರಕಾರದ ನಿಯಮದ ಪ್ರಕಾರ ಹುದ್ದೆಗಳ ಕ್ಲಾಸಿಫಿಕೇಷನ್ ಮಾಡಿ ಯಾರು ಯಾರಿಗೆ ಎಷ್ಟು ಭಾಗ ಕೊಡಬೇಕು ಎಂದು ನಿಯಮದ ಪ್ರಕಾರ ಷೆಡ್ಯೂಲ್ಡ್ ಕ್ಯಾಸ್ಟಿನವರು ಮುಂತಾದವರಿಗೆ ಪರ್ಸೆಂಟೇಜ್ ಕೊಡಲಾಗಿದೆಯೇ ? ಅದರ ಪ್ರಕಾರ ಭರ್ತಿ ಮಾಡಬೇಕೆಂದು ತಿಳಿಸಲಾಗಿದೆಯೇ ?

ಶ್ರೀ ವಿ. ಎಸ್. ಕೌಜಲಗಿ.—ಈಗ ಹಂಗಾಮಿಯಾಗಿ ಹುದ್ದೆಗಳನ್ನು ಭರ್ತಿಮಾಡಿದೆ.

ಅಧ್ಯಕ್ಷರು —ಶ್ರೀ ಬಿ. ಜಿ. ಬಣಕಾರ್‌ರವರು ಪ್ರಶ್ನೆ ನಂ. ೭೦೬ ಹಾಕುವುದಕ್ಕೆ ಅನುಮತಿ ನೀಡಲಾಗಿದೆ. ಅವರು ಪ್ರಶ್ನೆ ಹಾಕಬಹುದು.

SALARY OF PATELS

SRI B. G. BANAKAR (Hirekerur).—On behalf of.

706. SMT. C. NAGAMMA KESAVAMURTHY (Davangere).—Will the Minister for Revenue be pleased to state.

(*a*) the difference between the potige paid to the patels of old Mysore area and the salary paid to the patels having same status in Bellary area ;

(*b*) whether the Government have thought of fixing uniform amount in this behalf ;